# ತುಳುನಾಡ ಸಿರಿ ಕಾವ್ಯ: ಆಧುನಿಕ ಒಳನೋಟ

**ಮಂಗಳ ಬಿ.ಎನ್.**

ಕನ್ನಡ ಉಪನ್ಯಾಸಕರು, ಶ್ರೀಮತಿ ಅಲ್ಲಂ ಸುಮಂಗಳಮ್ಮ ಸ್ಮಾರಕ ಮಹಿಳಾ ಮಹಾವಿದ್ಯಾಲಯ, ಬಳ್ಳಾರಿ.

DOI: https://doi.org/10.5281/zenodo.15795747

## ABSTRACT:

ಸತ್ಯನಾಪುರ ಅರಮನೆಯ ಸೋಮಲಾದೇವಿಯು ಮಜಲೊಟ್ಟುಬೂದುವಿನ ಬರ್ಮಣ್ಣಯ್ಯ ವಂಶದ ಬರ್ಮನಾಳ್ವಳನ್ನು ವಿವಾಹವಾದರು. ಅವರಿಗೆ ಹೆಣ್ಣು ಮಗು ಬೇಕೆಂದು ಆಸೆ ಇತ್ತು. ಬರ್ಮನಾಳ್ವ ಸತ್ಯನಾಪುರದ ಬರ್ಮೆರನನ್ನು ಪೂಜಿಸಿ ಮಗುವಿನ ಜನನವನ್ನು ಆಶೀರ್ವದಿಸಿದನು. ನಂತರ ಬರ್ಮೆರನು ಬ್ರಾಹ್ಮಣನ ವೇಷದಲ್ಲಿ ಬರ್ಮನಾಳ್ವನ ಕಡೆಗೆ ಬಂದು ಅವನಿಗೆ ಪಿಂಗಾರ (ಅಡಿಕೆ ಮರದ ಹೂವು) ಎಲೆಯನ್ನು ಕೊಟ್ಟನು. ಬರ್ಮನಾಳ್ವ ಪಿಂಗಾರವನ್ನು ತಂದು ಮನೆಯಲ್ಲಿದ್ದ ಕಲ್ಲಿನ ಪೆಟ್ಟಿಗೆಯಲ್ಲಿ ಇಟ್ಟನು. ಆಗ ಕಲ್ಲ ಕಲೆಂಬಿ (ಕಲ್ಲಿನ ಪೆಟ್ಟಿಗೆ) ಒಳಗಿನಿಂದ, ಅದು ಮಗುವಿನ ಅಳುವಿಕೆಯಂತೆ ಸದ್ದು ಮಾಡಿತು. ಕಲ್ಲಿನ ಪೆಟ್ಟಿಗೆಯಲ್ಲಿ ಹೆಣ್ಣು ಮಗುವನ್ನು ನೋಡಿ ಬರ್ಮನಾಳ್ವ ಆಶ್ಚರ್ಯಚಕಿತನಾದನು ಮತ್ತು ನಂತರ ಅದಕ್ಕೆ ಅಕ್ಕೆರುಸು ಸಿರಿ ಎಂದು ಹೆಸರಿಸಿದನು.

ಅಕ್ಕೇರುಸು ವಯಸ್ಕನಾದ ನಂತರ, ಬರ್ಮನಾಳ್ವ ಬಸ್ರೂರ್ ಅರಮನೆಯ ಕಾಂತುಪೂಂಜನೊಂದಿಗೆ ಸಿರಿಯ ವಿವಾಹವನ್ನು ಏರ್ಪಡಿಸಿದನು. ಕಾಂತು ಪೂಂಜ ಎರಡೂ ಸಂಸ್ಥಾನಗಳ (ಮಜಲುಟ್ಟು ಬೂದು ಮತ್ತು ಬಸ್ರೂರ್ ಬೂದು) ಆಡಳಿತವನ್ನು ಯಾವುದೇ ಶ್ರೇಣಿಯ ವ್ಯತ್ಯಾಸವಿಲ್ಲದೆ ನೋಡಿಕೊಳ್ಳುತ್ತಾನೆ ಮತ್ತು ಅವನು ಸತ್ತ ನಂತರ ಅಂತ್ಯಕ್ರಿಯೆ ಮಾಡುತ್ತಾನೆ ಎಂದು ಬರ್ಮನಾ ಆಳ್ವನಿಗೆ ಭರವಸೆ ನೀಡಿದನು. ಈ ಸಂಗತಿಗಳನ್ನು ತುಳುನಾಡ ಸಿರಿ ಕಾವ್ಯ: ಆಧುನಿಕ ಒಳನೋಟ ಲೇಖನದಲ್ಲಿ ವಿವರಣಾತ್ಮಕವಾಗಿ ಚರ್ಚಿಸಲಾಗಿದೆ.

## KEYWORDS:

ಕನ್ಯಾಶುಲ್ಕ, ಸಿರಿಸಂಧಿ, ಶಾಂತಸಾಗರ, ಚಮತ್ಕಾರ, ಕಂಗೊಳಿಸು, ಗಟ್ಟಿಧ್ವನಿ.

ಕರ್ನಾಟಕದಲ್ಲಿ ಜನಪದ ಸಂಸ್ಕೃತಿ ಅತ್ಯಂತ ಶ್ರೀಮಂತವಾಗಿದೆ. ಕಲೆ, ಸಾಹಿತ್ಯ, ನೃತ್ಯ ಮೊದಲಾದ ಪ್ರಕಾರಗಳನ್ನು ನಮ್ಮ ಜನಪದ ಸಂಸ್ಕೃತಿಯಲ್ಲಿ ಕಾಣಬಹುದಾಗಿದೆ. ಇವು ಪ್ರಾದೇಶಿಕವಾಗಿ ತಮ್ಮದೇ ಆದ ವಿಶೇಷತೆ ಪಡೆದಿವೆ. ಇವು ನಮ್ಮ ಆಚಾರ ವಿಚಾರ, ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ತಿಳಿಸಿ ಕೊಡುತ್ತವೆ. ಇಂದಿನ ಪಾಶ್ಚಾತ್ಯ ಶೈಲಿಯ ಜೀವನದ ಮಧ್ಯೆ ಜಾನಪದ ತನ್ನ ವೈಭವವನ್ನು ಕಳೆದುಕೊಂಡಿದೆಯಾದರೂ ಹಳ್ಳಿಗಳಲ್ಲಿ, ಜಾತ್ರೆ, ಉತ್ಸವಗಳಲ್ಲಿ ಇನ್ನೂ ತನ್ನತನ ಉಳಿಸಿಕೊಂಡಿರುವುದು ಸಮಾಧಾನ ಸಂಗತಿಯಾಗಿದೆ. ಪ್ರಾದೇಶಿಕವಾಗಿ ಪ್ರತಿ ಜನಪದ ಸಂಸ್ಕೃತಿಯು ಒಂದು ಪ್ರದೇಶದ ಜನರ ಜೀವನದ ದೈವ, ಧಾರ್ಮಿಕ ಆಚರಣೆ, ಸಾಮಾಜಿಕ ನೆಲೆಗಳನ್ನು ನಮ್ಮ ಮುಂದೆ ತೆರೆದಿಡುತ್ತವೆ.

ಕರ್ನಾಟಕದಲ್ಲಿ ಕರಾವಳಿ ಪ್ರದೇಶಗಳಾದ ಅರಬ್ಬೀ ಸಮುದ್ರ ತೀರ ಪ್ರದೇಶಗಳು ಅಲ್ಲಿನ ಭೂತ, ಕೋಲ ದೈವ ಹೀಗೆ ಹತ್ತು ಹಲವು ಧಾರ್ಮಿಕ ಆಚರಣೆಗಳಿಂದ ತಮ್ಮದೇ ವೈಶಿಷ್ಟ್ಯವನ್ನು ಒಳಗೊಂಡಿವೆ. ಮಂಗಳೂರು, ಉಡುಪಿ, ದಕ್ಷಿಣ ಕನ್ನಡ, ಕಾಸರಗೋಡು ಪ್ರದೇಶಗಳನ್ನು ಒಟ್ಟಾರೆ ತುಳುನಾಡು ಎಂದು ಕರೆಯುತ್ತಾರೆ. ಈ ತುಳುನಾಡು ಹಲವು ಬಗೆಯ ವೈಶಿಷ್ಟ್ಯತೆಗಳಿಂದ ಕೂಡಿರುವ ಪ್ರದೇಶವಾಗಿದೆ. ಇಲ್ಲಿನ ಭಾಷೆ, ಸಂಸ್ಕೃತಿ, ಸಾಹಿತ್ಯ, ಚರಿತ್ರೆ ಹಾಗೂ ಭೌಗೋಳಿಕತೆ ಪ್ರತ್ಯೇಕ ಅಸ್ತಿತ್ವವನ್ನು ಹೊಂದುವ ಸಾಮರ್ಥ್ಯವನ್ನು ನೀಡಿವೆ. ತುಳುನಾಡು ಆಡಳಿತಾತ್ಮಕವಾಗಿ ಕನ್ನಡ ನಾಡಿನಲ್ಲಿದ್ದರೂ ಕನ್ನಡ ನಾಡಿಗಿಂತ ಭಿನ್ನವಾದ ಸಂಸ್ಕೃತಿ ಹೊಂದಿರುವ ಪ್ರದೇಶವಾಗಿದೆ. ತನ್ನದೇ ಆದ ಸ್ವತಂತ್ರ ಭಾಷೆಯನ್ನು ಹೊಂದಿರುವ ತುಳುನಾಡು ಭೌಗೋಳಿಕವಾಗಿ ಅಷ್ಟೇನು ವಿಸ್ತಾರವಾದ ಭೂ ಪ್ರದೇಶವನ್ನು ಹೊಂದಿಲ್ಲ. ಚಾರಿತ್ರಿಕವಾಗಿ ಇದು ಕನ್ನಡದ ಎಲ್ಲ ಪ್ರಭುಗಳ ಅಧೀನದಲ್ಲಿಯೇ ಇತ್ತು. ಆದರೆ ಅಲ್ಲಿನ ಜನಪದ ಆಚರಣೆಗಳಾದ ಭೂತಾರಾಧನೆ, ಯಕ್ಷಗಾನ, ತಾಳಮದ್ದಲೆ, ನಾಗಮಂಡಲ, ಕೋಳಿಅಂಕ, ಕಂಬಳ ಮುಂತಾದವು ತುಳುನಾಡಿನ ಜನತೆಯ ಜೀವಂತಿಕೆಯನ್ನು ತುಂಬಿ ಮನಸ್ಸಿನ ಸೃಜನಶೀಲತೆಯನ್ನು ಹುಟ್ಟುಹಾಕಿವೆ. ಪಾಡ್ಡನಗಳೆಂಬ ಮೌಖಿಕ ರಚನೆಗಳು ಅಲ್ಲಿನ ಜೀವಂತ ಸಾಹಿತ್ಯ. ಇವು ಜಾನಪದ ಹಾಡುಗಳಾಗಿದ್ದು ಇತ್ತೀಚೆಗೆ ಗ್ರಂಥರೂಪದಲ್ಲಿ ಹೊರಬಂದಿವೆ. ಪ್ರಸ್ತುತ ಲೇಖನವು ಇದೇ ಬಗೆಯ ಪಾಡ್ಡನವೊಂದಕ್ಕೆ ಸಂಬಂಧಿಸಿದುದಾಗಿದೆ. ಸಿರಿ ಮಹಾಕಾವ್ಯ ತುಳುನಾಡಿನ ಮಹಾಕಾವ್ಯವಾಗಿದೆ. ಇದನ್ನು "ಸಿರಿ ಪಾಡ್ಡನ" ಅಥವಾ "ಸಿರಿಸಂಧಿ" ಎಂದು ಕರೆಯಲಾಗುತ್ತದೆ. ಈ ಪಾಡ್ಡನಗಳು ತುಳುನಾಡಿನ ರಾಜಕೀಯ ಇತಿಹಾಸ ಮತ್ತು ಸಾಮಾಜಿಕ ಮೌಲ್ಯಗಳನ್ನು ಒಳಗೊಂಡಿವೆ. ಇವು ದೈವಾರಾಧನೆಗೆ ಮಾತ್ರ ಸೀಮಿತವಾಗಿರದೇ ತುಳುನಾಡಿನ ಸಾಂಸ್ಕೃತಿಕ ಬದುಕಿನ ಚಿತ್ರಣವನ್ನೂ ತೆರೆದಿಡುತ್ತವೆ. ಸಿರಿ ಕಥೆಯನ್ನು ಕೇವಲ ಜಾನಪದ ದೃಷ್ಟಿಯಿಂದ ಮಾತ್ರವಲ್ಲ, ಮಾತೃಪ್ರಧಾನ

ಸಮಾಜದ ದೃಷ್ಟಿಯಿಂದಲೂ ಅಧ್ಯಯನ ನಡೆಸಲಾಗಿದ್ದು ಇದು ಪುರುಷ ಪ್ರಾಧಾನ್ಯತೆಯನ್ನು ನಿರಾಕರಿಸುವ ಒಂದು ಕಥನವಾಗಿದೆ. ಮಾತೃಪ್ರಧಾನ ಕುಟುಂಬದ ಹಲವು ತಲೆಮಾರುಗಳ ವಿವರ ಒಳಗೊಂಡಿದೆ. ಸಿರಿ ಎನ್ನುವ ಮಹಿಳೆಯ ಜೀವನವೇ ಈ ಮಹಾಕಾವ್ಯ. ಈ ಕಾವ್ಯವು 15683 ಸಾಲುಗಳನ್ನು ಹೊಂದಿದೆ. ಈ ಸಿರಿ ಸಾಮಾನ್ಯ ಹೆಣ್ಣಲ್ಲ, ಇವಳು ದೈವ ಸಂಭೂತೆಯಾಗಿದ್ದು, ಈ ಭಾಗದ ಜನರು ಕೇವಲ ಕಾವ್ಯದ ಭಾಗವಾಗಿ ಸ್ವೀಕರಿಸದೆ ಅಲ್ಲಿನ ದೈವದಂತೆ ಪೂಜಿಸಿದ್ದಾರೆ. ದೈವದಂತೆಯೇ ಒಪ್ಪಿಕೊಂಡು ಇವಳ ಹೆಸರಿನ ಜಾತ್ರೆ, ಉತ್ಸವ ಆಚರಿಸುತ್ತಾರೆ.

**ಸಿರಿ ಕಥೆಯ ಸಾರಾಂಶ:**

ಒಂದಾನೊಂದು ಕಾಲದಲ್ಲಿ ಸತ್ಯಾನಂದಪುರ ಎಂಬ ಊರಲ್ಲಿ ಬರ್ಮನಾಳ್ವ ಎಂಬ ಶ್ರೀಮಂತನಿದ್ದನು. ಅವನಿಗೆ ಎಲ್ಲಾ ಇದ್ದರೂ ನೆಮ್ಮದಿ ಇರಲಿಲ್ಲ ಹಾಗೂ ಮಕ್ಕಳಿರಲಿಲ್ಲ. ಅವನ ಕುಟುಂಬದವರೆಲ್ಲಾ ದೇವರಪಾದ ಸೇರಿಹೋದನಂತರ ಅವರ ಊರಿನ ಅನ್ನುಶೆಟ್ಟಿ ಎನ್ನುವ ವ್ಯಕ್ತಿಗೆ ತನ್ನ ಆಸ್ತಿಯನ್ನು ನೋಡಿಕೊಳ್ಳಲು ಹೇಳಿರುತ್ತಾನೆ. ತನ್ನ ಜೀವನದ ಕೊನೆಯ ಘಳಿಗೆ ಒಂಟಿಯಾಗಿ ಕಳೆಯಬೇಕಲ್ಲ ಎಂಬ ಚಿಂತೆಯಲ್ಲಿರುತ್ತಾನೆ. ಬರ್ಮನಾಳ್ವನು ತನ್ನ ಮನೆಯ ಕೆಲಸದಾಕೆ ದಾರು ಎನ್ನುವವಳಿಗೆ ಮನೆಯ ಬಾಗಿಲು ತೆಗೆಯ ಬೇಡ, ನನಗೆ ಯಾರೊಂದಿಗೆ ಮಾತನಾಡಲು, ಭೇಟಿಯಾಗಲು ಇಷ್ಟವಿಲ್ಲ, ನಿನಗೆ ಬೇಕಾದರೆ ಹಿಂದಿನ ಬಾಗಿಲಿನಿಂದ ಓಡಾಡು ಎಂದು ಮಲಗುತ್ತಾನೆ. ಆಗ ಬ್ರಹ್ಮದೇವರು ಬರ್ಮನಾಳ್ವನ ಮನೆಗೆ ಭಿಕ್ಷೆ ಕೇಳಲು ಬರುತ್ತಾನೆ. ಭಿಕ್ಷೆ ನೀಡಲು ದಾರು ಹೋದಾಗ ಬ್ರಹ್ಮದೇವರು ಭಿಕ್ಷೆ ತೆಗೆದುಕೊಳ್ಳಲು ನಿರಾಕರಿಸಿ ಮನೆಯ ಒಡೆಯನೇ ಭಿಕ್ಷೆ ನೀಡಬೇಕೆಂದು ಹಠ ಹಿಡಿಯುತ್ತಾನೆ. ಬೇರೆ ದಾರಿ ಇರದೆ ತಾನೇ ಭಿಕ್ಷೆ ನೀಡುತ್ತಾನೆ. ಆಗ ಬ್ರಹ್ಮದೇವರು ಆದಿ ಅಲ್ಲದೆ ಮೂಲಸ್ಥಾನವಾದ ನಿಡ್ಗಲ್‌ನಲ್ಲಿದ್ದು ಅದನ್ನು ಜೀರ್ಣೋದ್ಧಾರ ಮಾಡಿಸು, ನಿನಗೆ ನೆಮ್ಮದಿ ಸಿಗುತ್ತದೆ ಎಂದು ಹೇಳಿ ಹೊರಟು ಹೋಗುತ್ತಾನೆ. ಅದರಂತೆಯೇ ಬರ್ಮನಾಳ್ವ ದೇವಸ್ಥಾನ ಸರಿಪಡಿಸಿ ನಿತ್ಯಪೂಜೆ ಪುನಸ್ಕಾರಗಳು ಮಾಡುವಂತೆ ಮಾಡುತ್ತಾನೆ. ಆಗ ಅಲ್ಲಿಗೆ ಭಿಕ್ಷುಕನ ರೂಪದಲ್ಲಿ ಬಂದ ಬ್ರಹ್ಮದೇವರು ಸಂತೋಷದಿಂದ ಆಶೀರ್ವದಿಸಿ ಅಡಿಕೆಯ ಹಿಂಗಾರವನ್ನು ಪ್ರಸಾದ ನೀಡಿ ಅದನ್ನು ಧಾನ್ಯ ಇಡುವ ಕಲುಬೆಯಲ್ಲಿ ಇಡುವಂತೆ ಹೇಳಿ ಹೊರಟುಹೋಗುತ್ತಾನೆ. ಬರ್ಮನಾಳ್ವನು ಅವನ ಹೇಳಿಕೆಯಂತೆ ಧಾನ್ಯದ ಕುಲುಬೆಯಲ್ಲಿಟ್ಟ ಅಡಿಕೆಯ ಹಿಂಗಾರ ಸುಂದರ ಹೆಣ್ಣುಮಗುವಾಗುತ್ತದೆ. ಮಗುವಿನ ಅಳುವ ಧ್ವನಿ ಕೇಳಿ ಕುಲುಬೆ ತೆಗೆದು ನೋಡಿದಾಗ ಅದರಲ್ಲಿ ಸುಂದರವಾದ ಹೆಣ್ಣುಮಗು ಇರುತ್ತದೆ. ಎಲ್ಲಾ ದೇವರ ದಯೆ ಎಂದು ಆ ಮಗುವಿಗೆ ಸಿರಿ ಎಂದು ಹೆಸರಿಟ್ಟು ಸಾಕಿ ಬೆಳೆಸುತ್ತಾನೆ. ತಂದೆಯ ಪ್ರೀತಿ ಹಾಗೂ ದಾರುವಿನ ಆರೈಕೆಯಲ್ಲಿ ಬೆಳೆದು ದೊಡ್ಡವಳಾಗುವ ಸಿರಿ ನೋಡಲು ಅಪ್ಸರೆಯಂತೆ

ಕಂಗೊಳಿಸುವುದು ಮಾತ್ರವಲ್ಲದೇ ಬುದ್ಧಿವಂತೆಯಾಗಿರುತ್ತಾಳೆ. ದೇವರ ಪ್ರಸಾದದಿಂದ ಹುಟ್ಟಿದವಳಾದ್ದರಿಂದ ದೈವಾಂಶವೂ ಅವಳಲ್ಲಿ ಇರುತ್ತದೆ. ಅಂತೆಯೇ ವಯಸ್ಸಾದ ತಂದೆಗೆ ಆಸರೆಯಾಗಿ ನಿಂತು ಮನೆವಾಳ್ತೆಯನ್ನೂ ವಹಿಸಿಕೊಳ್ಳುತ್ತಾಳೆ. ಆದರೆ ಬರ್ಮನಾಳ್ವನಿಗೆ ಮಕ್ಕಳಿಲ್ಲವೆಂದು ಅವನ ಆಸ್ತಿಯನ್ನು ನೋಡಿಕೊಳ್ಳುತ್ತಿದ್ದ ಅನ್ನುಶೆಟ್ಟಿ, ಬರ್ಮನಾಳ್ವನ ಆಸ್ತಿಯೆಲ್ಲಾ ತನಗೇ ಸಿಗುತ್ತದೆ ಎಂದು ಕಾಯುತ್ತಿದ್ದವನಿಗೆ ಸಿರಿಯ ಬುದ್ಧಿವಂತಿಕೆ ಮುಳ್ಳಾಗುತ್ತದೆ. ಅವಳನ್ನು ದ್ವೇಷಿಸಲು ಪ್ರಾರಂಭಿಸುತ್ತಾನೆ. ಆವಳು ಮದುವೆಯಾಗಿ ಗಂಡನ ಮನೆಗೆ ಹೋದರೆ ತನಗೆ ಆಸ್ತಿ ಸಿಗುತ್ತದೆ ಎಂದು ಬರ್ಮನಾಳ್ವನಿಗೆ ಸಿರಿಯ ಮದುವೆ ಮಾಡುವಂತೆ ಸೂಚಿಸುತ್ತಾನೆ. ಅನ್ನುಶೆಟ್ಟಿಯ ಮಾತಿನ ಹಿಂದಿನ ರಹಸ್ಯ ತಿಳಿಯದ ಬರ್ಮನಾಳ್ವ ಆವಳಿಗೆ ಸೂಕ್ತ ವರ ಹುಡುಕುವ ಕೆಲಸಕ್ಕೆ ತೊಡಗುತ್ತಾನೆ. ಅಂತೆಯೇ ಇದನ್ನು ಅರಿತ ಕುಂದಾಪುರದ ಶಂಕ್ರುಪೂಂಜಾ ಎನ್ನುವ ಮಹಿಳೆ ತನ್ನ ಮಗ ಕಾಂತುಪೂಂಜನಿಗೆ ಸಿರಿಯನ್ನು ವಿವಾಹ ಮಾಡಿಕೊಡಲು ಕೇಳುತ್ತಾಳೆ. ಎರಡೂ ಕಡೆ ಮದುವೆಗೆ ಒಪ್ಪಿಗೆ ಸಿಕ್ಕ ನಂತರ ಸಿರಿ ಒಂದು ಷರತ್ತನ್ನು ವಿಧಿಸುತ್ತಾಳೆ. ಎಲ್ಲರೂ ಇವಳ ಧೈರ್ಯಕ್ಕೆ ದಂಗಾಗುತ್ತಾರೆ. ಯಾಕೆಂದರೆ ಸಿರಿ ತನ್ನ ತಂದೆಗೆ ತಾನೊಬ್ಬಳೇ ಮಗಳಿರುವ ಕಾರಣ ಅವರ ಕೊನೆಯ ಕಾಲದಲ್ಲಿ ಅವರನ್ನು ತಾನು ನೋಡಿಕೊಳ್ಳುವುದು ತನ್ನ ಕರ್ತವ್ಯ ಅದಕ್ಕೆ ಮದುವೆಯ ನಂತರ ತಾನು ಗಂಡನ ಮನೆಗೆ ಬರಲಾರೆ ಎಂದಾಗ ಕಾಂತುಪೂಂಜ ಸಿರಿಯ ಮನೆಯಲ್ಲಿ ಉಳಿಯುತ್ತಾನೆ. ಇದರಿಂದ ಅನ್ನುಶೆಟ್ಟಿಗೆ ಸಿರಿಯ ಮೇಲೆ ಇನ್ನೂ ಹೆಚ್ಚು ಕೋಪಬರುತ್ತದೆ. ಇತ್ತ ಸಿರಿ ಮದುವೆಯಾಗಿ ಸಂಪೂರ್ಣ ಜವಾಬ್ದಾರಿ ತೆಗೆದುಕೊಂಡಮೇಲೆ ಆಸ್ತಿ ತನ್ನ ಹೆಸರಿಗಾಗುತ್ತದೆ ಎಂಬ ನಿರೀಕ್ಷೆಯಲ್ಲಿದ್ದ ಕಾಂತುಪೂಂಜನಿಗೂ ನಿರಾಸೆ ಯಾಗುತ್ತದೆ. ಮುಂದೆ ಸರಿಹೋಗಬಹುದೆಂದು ಸುಮ್ಮನಾಗುತ್ತಾನೆ. ಇವರ ಸುಂದರ ಜೀವನ ಪ್ರಾರಂಭವಾಗಿ ಸಿರಿ ಗರ್ಭಿಣಿಯಾಗುತ್ತಾಳೆ. ಅವಳ ಸೀಮಂತ ದಿನ ಗೊತ್ತು ಮಾಡಿದಾಗ ಕಾಂತುಪೂಂಜ ವಾಡಿಕೆಯಂತೆ ಸೀರೆ ತರಲು ಪೇಟೆಗೆ ಹೋಗುತ್ತಾನೆ. ಪೇಟೆಯಲ್ಲಿ ಅವಳಿಗೆ ಬೆಲೆಬಾಳುವ ಸೀರೆ, ಒಡವೆ, ಹಣ್ಣು ಹಂಪಲು, ಸಿಹಿ ತೆಗೆದುಕೊಂಡು ಮರಳಿಬರುವಾಗ ಅವನಿಗೆ ಮೊದಲಿಂದಲೂ ಹೊರಗಿನ ಹೆಣ್ಣುಗಳ ಸಹವಾಸ ವಿರುತ್ತದೆ. ಅಂತಹ ಒಬ್ಬ ಸಿದ್ದು ಎಂಬ ವೇಶ್ಯೆಯ ಮನೆಗೆ ಹೋಗಿ ಅವಳ ಸಂಗ ಬೆಳೆಸುತ್ತಾನೆ. ಅವಳಿಗೆ ಅವನು ತಂದ ಸೀರೆ, ಒಡವೆ ನೋಡಿ ಅಸೂಯೆ ಉಂಟಾಗುತ್ತದೆ. ಅವಳು ಅದನ್ನು ತನಗೆ ಕೊಡು ಎಂದು ಕೇಳಿದಾಗ ಅವನು ಅದು ತನ್ನ ಹೆಂಡತಿಗೆ ತಂದಿರುವ ಉಡುಗೊರೆ ಕೊಡಲಾರೆ ಎನ್ನುತ್ತಾನೆ. ಅದಕ್ಕವಳು ಅದನ್ನು ಒಮ್ಮೆ ನೋಡುತ್ತೇನೆಂದು ಬಿಚ್ಚಿ ತಾನು ಧರಿಸುತ್ತಾಳೆ ಮತ್ತೆ ಮೊದಲಂತೆಯೇ ಮಡಿಕೆ ಮಾಡಿ ಇಡುತ್ತಾಳೆ. ಸೀಮಂತದ ದಿನ ಅದೇ ಸೀರೆಯನ್ನು ಸಿರಿಗೆ ಕೊಡುತ್ತಾನೆ. ಅದನ್ನು ತೆಗೆದು ನೋಡಿದಾಗ ತನಗೂ ಮೊದಲೇ ಬೇರೆಯಾರೋ ಧರಿಸಿರುವುದು ಗೊತ್ತಾಗಿ ತನ್ನ ದೈವ ಶಕ್ತಿಯಿಂದ ಅದರ ವೃತ್ತಾಂತ

ತಿಳಿದುಕೊಳ್ಳುತ್ತಾಳೆ ಮತ್ತು ಆ ಸೀರೆ ಧರಿಸದೇ ತನ್ನ ತಂದೆ ಧಾರೆಗೆ ತಂದಿದ್ದ ಸೀರೆಯನ್ನು ಧರಿಸುತ್ತಾಳೆ. ಕಾಂತುಪೂಂಜ ಕಾರಣ ಕೇಳಿದಾಗ ಪರಸ್ತ್ರೀ ಧರಿಸಿದ ಸೀರೆ ಉಡಲಾರೆ ಎಂದು ಎಲ್ಲ ಜನರೆದುರು ಕಾಂತುಪೂಂಜನ ತಪ್ಪನ್ನು ಪ್ರಶ್ನಿಸುತ್ತಾಳೆ. ಇದರಿಂದ ಕೋಪಗೊಂಡ ಕಾಂತುಪೂಂಜ ಸಿರಿಯ ಮನೆಯನ್ನು ಬಿಟ್ಟು ತನ್ನ ಊರಿಗೆ ತೆರಳುತ್ತಾನೆ. ಇದನ್ನು ತಿಳಿದ ಅನ್ನುಶೆಟ್ಟಿ ಕಾಂತುಪೂಂಜನ ಜೊತೆ ಸೇರಿ ಕುಮ್ಮಕ್ಕು ನಡೆಸುತ್ತಾನೆ. ಹೀಗೆ ಶಾಂತಸಾಗರದಂತಿದ್ದ ಸಿರಿಯ ಬಾಳಲ್ಲಿ ಸಮಸ್ಯೆಗಳ ಬಿರುಗಾಳಿ ಬೀಸುತ್ತದೆ. ಕೆಲವು ಕಾಲಗಳನಂತರ ಸಿರಿಗೆ ಹೆರಿಗೆ ಆಗುತ್ತದೆ. ಮುದ್ದಾದ ಗಂಡು ಮಗುವಿಗೆ ಜನ್ಮ ನೀಡುತ್ತಾಳೆ. ಮಗುವಿನ ಜಾತಕ ತೆಗೆಸಿದಾಗ ಮಗುವಿನ ಮುಖ ಬರ್ಮನಾಳ್ವ ನೋಡಬಾರದು, ನೋಡಿದರೆ ಅವನ ಅಂತ್ಯ ವಾಗುತ್ತದೆ ಎಂದು ತಿಳಿದು ಬರುತ್ತದೆ. ಮಗನಿಗೆ ಕುಮಾರ ಎಂದು ಹೆಸರಿಟ್ಟು ಸಿರಿ ತನ್ನ ತಂದೆಗೆ ದೂರವಿಟ್ಟು ಸಾಕುತ್ತಾಳೆ. ಸೇವಕಿಯಾದ ದಾರುವಿನ ಆರೈಕೆಯಲ್ಲಿ ಮಗು ಚೆನ್ನಾಗಿರುತ್ತದೆ. ಒಂದು ದಿನ ದಾರು ಮತ್ತು ಸಿರಿ ಇಬ್ಬರೂ ಇಲ್ಲದಾಗ ಅಳುತ್ತಿರುವ ಮಗುವನ್ನು ನೋಡಿ ಬರ್ಮನಾಳ್ವ ಸಮಾಧಾನ ಪಡಿಸಿ ಮಲಗಿಸುತ್ತಾನೆ. ಶಾಸ್ತ್ರ ಹೇಳಿದಂತೆ ಬರ್ಮನಾಳ್ವ ಕಾಲುಜಾರಿ ಬಿದ್ದು ಮರಣಿಸುತ್ತಾನೆ. ಇದರಿಂದ ಸಿರಿ ಮಾತ್ರವಲ್ಲ ಇಡೀ ಸತ್ಯಾನಂದಪುರವೇ ಅನಾಥವಾಗುತ್ತದೆ. ಸಿರಿ ತನ್ನ ಪತಿಯ ಎಲ್ಲ ತಪ್ಪು ಕ್ಷಮಿಸಿ ಸಹಾಯ ಕೇಳಿದಾಗ ಅವನು ಅನ್ನುಶೆಟ್ಟಿ ಮಾತು ಕೇಳಿ ಅಹಂಕಾರದಿಂದ ತಿರಸ್ಕರಿಸುತ್ತಾನೆ. ಆಗ ಸಮಾಜ ಅವಳನ್ನು ಅವಮಾನಿಸುತ್ತದೆ. ಅನ್ನುಶೆಟ್ಟಿ ಸಮಾಜದ ಕೆಲವು ಮುಖಂಡರಿಗೆ ಲಂಚಕೊಟ್ಟು ಆಸ್ತಿ ತಾನೇ ನೋಡಿಕೊಳ್ಳುವಂತೆ ಮಾಡಿ ಸಿರಿಯನ್ನು ಅಲ್ಲಿಂದ ಅವಮಾನಿಸಿ ಹೊರಹಾಕಿಸುತ್ತಾನೆ. ತನ್ನ ದೈವಶಕ್ತಿಯಿಂದ ಎಲ್ಲಾ ಅರಿತ ಸಿರಿ ನೋವು ಮತ್ತು ಹತಾಶೆಗೆ ಒಳಗಾಗುತ್ತಾಳೆ. ಸೇವಕಿ ದಾರು ಮತ್ತು ಮಗ ಕುಮಾರನೊಂದಿಗೆ ಮನೆಬಿಟ್ಟು ಹೊರಟ ಸಿರಿ ಎಲ್ಲವೂ ನಾಶವಾಗಲಿ ಎಂದು ಶಾಪ ಹಾಕುತ್ತಾಳೆ. ಅದರಂತೆ ಎಲ್ಲಾ ಹೊತ್ತಿ ಉರಿಯುತ್ತದೆ. ಮತ್ತೆ ಗಂಡನ ಮನೆಗೆ ಬಂದ ಸಿರಿಗೆ ಅವರ ಅತ್ತೆ ಆರತಿ ಮಾಡಿ ಒಳಗೆ ಕರೆದುಕೊಂಡಾಗ ಕಾಂತುಪೂಂಜ ತಾನು ಮನೆಯಲ್ಲಿ ಇಲ್ಲ ಎಂದು ತಾಯಿಗೆ ಹೇಳುವಂತೆ ಹೇಳುತ್ತಾನೆ. ಅದನ್ನರಿತ ಸಿರಿ ತನಗೆ ವಿಚ್ಛೇದನ ಬೇಕೆಂದು ಕೇಳುತ್ತಾಳೆ. ವಿಚ್ಛೇದನ ಪಡೆದು ಹಲವು ಚಮತ್ಕಾರ ಮಾಡುತ್ತಾ ಸಿರಿ ಮುನ್ನಡೆಯುತ್ತಾಳೆ. ಮುಂದೆ ಕರಿಯ ಕಾಳಿಂಗ, ಬಿಳಿಯ ದೇಸಿಂಗ ಎನ್ನುವ ಅವಳಿ ಸಹೋದರರಿಬ್ಬರು ಸಿರಿಯನ್ನು ನೋಡಿ ತಂಗಿಯೆಂದು ಸ್ವೀಕರಿಸುತ್ತಾರೆ. ಅವರ ಅರಮನೆಗೆ ಬರಲು ಕೇಳಿಕೊಂಡಾಗ ಸಿರಿಯ ಮಗ ಕುಮಾರ ತಾನು ಮಾವನ ಮನೆಯಲ್ಲಿರಲಾರೆ, ಮುಕ್ತಿ ಕೊಡೆಂದು ಕೇಳುತ್ತಾನೆ ಹಾಗೆಯೇ ದಾರು ಕೂಡ ಮುಕ್ತಿ ಕೇಳುತ್ತಾಳೆ. ಸಿರಿ ಅವರಿಬ್ಬರ ಆಸೆಯಂತೆ ಮುಕ್ತಿ ನೀಡಿ ತನ್ನ ಅಣ್ಣಂದಿರ ಮನೆ ಸೇರುತ್ತಾಳೆ. ಅಲ್ಲಿ ಅವರ ಸ್ನೇಹಿತ ಕೊಡಸರಾಳ್ವ ಒಮ್ಮೆ ಮನೆಗೆ ಬಂದಾಗ ಸಿರಿಯ ಅಂದಕ್ಕೆ ಮಾರುಹೋಗಿ ಅವಳನ್ನು ಮದುವೆ ಯಾಗುವೆ ಎನ್ನುತ್ತಾನೆ. ಸಮಾಜಕ್ಕೆ

ಎದುರಾಗಿ ಎರಡನೇ ವಿವಾಹ ವಾಗುತ್ತಾಳೆ. ಕೊಡಸರಾಳ್ವನ ಮನೆಗೆ ಹೋದಾಗ ಸಿರಿಗೆ ಆಘಾತವಾಗುತ್ತದೆ ಕಾರಣ ಅವನಿಗೆ ಈಗಾಗಲೇ ಮದುವೆಯಾಗಿ ಸಾಮು ಎಂಬ ಹೆಂಡತಿ ಇರುತ್ತಾಳೆ. ಆದರೆ ಸಿರಿ ತನ್ನ ಅಕ್ಕ ತನ್ನನ್ನು ಒಳಗೆ ಕರೆದರೆ ಮಾತ್ರ ಬರುವೆ ಎಂದಾಗ ಸಿರಿಯ ಸ್ವಭಾವ, ದೈವಾಂಶ ತಿಳಿದ ಅವಳು ಸಿರಿಯನ್ನು ಪ್ರೀತಿಯಿಂದ ಮನೆ ತುಂಬಿಸಿಕೊಳ್ಳುತ್ತಾಳೆ. ಮುಂದೆ ಮತ್ತೆ ಗರ್ಭಿಣಿಯಾದ ಸಿರಿ ತವರಿಗೆ ಬಂದು ಊಟಮಾಡಿ ಹೋಗುವಾಗ ಕಾಡಿನಲ್ಲಿ ಅಡಿಕೆಯ ಮರದಕೆಳಗೆ ಹೆಣ್ಣುಮಗುವಿಗೆ ಜನ್ಮ ನೀಡುತ್ತಾಳೆ ಮತ್ತು ಮುಕ್ತಿ ಪಡೆಯುತ್ತಾಳೆ. ಇಲ್ಲಿಗೆ ಸಿರಿಕಥೆ ಮುಗಿದು ಅವಳ ಮಗಳ ಕುರಿತ ಎರಡನೇ ತಲೆಮಾರಿನ ಕಥೆ ಪ್ರಾರಂಭವಾಗುತ್ತದೆ.

**ಸಿರಿ ಕಾವ್ಯದ ಆಧುನಿಕ ಒಳನೋಟಗಳು:**

ಆಧುನಿಕವಾಗಿ ಸಿರಿ ಕಾವ್ಯವನ್ನು ನೋಡುವುದಾದರೆ ಇದು ಪುರುಷ ಪ್ರಧಾನ್ಯತೆಯನ್ನು ನಿರಾಕರಿಸುವ, ರಾಜಕೀಯ, ಸಾಮಾಜಿಕ ಮೌಲ್ಯಗಳನ್ನು ಸ್ತ್ರೀ ಪರವಾಗಿ ತೋರಿಸುವ ಕಥೆಯಾಗಿದೆ. ಕಥೆಯನ್ನು ಹಲವು ಆಯಾಮಗಳಲ್ಲಿ ಆಧುನಿಕ ಸಂದರ್ಭದಲ್ಲಿ ಅಧ್ಯಯನ ಮಾಡಬಹುದಾಗಿದೆ. ರಾಜಕೀಯ ಸಂಘರ್ಷ, ಮಾತೃ ವಂಶೀಯತೆ, ಸ್ತ್ರೀ ಶೋಷಣೆ, ಸ್ತ್ರೀ ಸಬಲೀಕರಣ, ಸಾಮಾಜಿಕ ಸಂಘರ್ಷ ಇವೆಲ್ಲಾ ಈ ಕಾವ್ಯದ ಪ್ರಧಾನ ಅಂಶಗಳಾಗಿವೆ. ಮೊದಲನೆಯದಾಗಿ ಸಿರಿಯ ಮದುವೆ ಸಂದರ್ಭದಲ್ಲಿ ತಾನು ಮದುವೆಯಾಗಿ ಹೋದರೆ ಮುಪ್ಪಿನ ಕಾಲದಲ್ಲಿ ತಂದೆಗೆ ಯಾರು ಆಸರೆ ಎಂದು ಚಿಂತಿಸುತ್ತಾಳೆ ಮತ್ತು ಮದುವೆಯಾಗುವ ಗಂಡಿಗೆ ಶರತ್ತು ವಿಧಿಸಿ ತನ್ನ ಪತಿಯನ್ನು ತಂದೆಯ ಮನೆಗೆ ಬರುವಂತೆ ಮಾಡುವ ಇವಳು ಪುರುಷಪ್ರಧಾನ ಸಮಾಜದಲ್ಲಿ ಸಿರಿ ಮೊದಲನೆಯವಳಾಗುತ್ತಾಳೆ. ಮತ್ತು ಮನೆಯ ಜವಾಬ್ದಾರಿಯನ್ನು ಸಂಪೂರ್ಣ ನಿರ್ವಹಿಸುತ್ತಾಳೆ. ಆಸ್ತಿ ಮತ್ತು ಆಳ್ವಿಕೆ ನಿರೀಕ್ಷೆಯಲ್ಲಿದ್ದ ಕಾಂತುಪೂಂಜನಿಗೆ ಹಿನ್ನಡೆಯಾಗುತ್ತದೆ. ಇದು ಸಿರಿಯ ಮೊದಲ ಗೆಲುವು ಎನ್ನಬಹುದು. ಇದು ಸ್ತ್ರೀ ಸಬಲೀಕರಣದ ಪ್ರತೀಕವಾಗುತ್ತದೆ. ಎರಡನೆಯದಾಗಿ ಸಿರಿಯ ಸೀಮಂತದ ಸಂದರ್ಭದಲ್ಲಿ ಹೆಣ್ಣಿನ ತ್ಯಾಗ, ಸಹನೆಗೆ ಧನ್ಯತಾ ಭಾವ ತೋರಿಸುವ ಸಮಯ. ಆಗ ಕಾಂತುಪೂಂಜ ಬೆಲೆಬಾಳುವ ಸೀರೆ ತೆಗೆದುಕೊಂಡು ವೇಶ್ಯೆಯೊಬ್ಬಳ ಸಹವಾಸ ಮಾಡಿ ಹೆಂಡತಿಗೆ ಮೋಸ ಮಾಡುತ್ತಾನೆ. ಅದನ್ನು ತನ್ನ ದೈವಶಕ್ತಿಯಿಂದ ತಿಳಿಯುವ ಸಿರಿ ಎಲ್ಲರ ಸಮ್ಮುಖದಲ್ಲಿ ಆತನನ್ನು ಪ್ರಶ್ನಿಸುತ್ತಾಳೆ. ಪರಸ್ತ್ರೀ ಉಟ್ಟ ಸೀರೆ ನಾ ಉಡಲಾರೆ ಎಂದು ನಿರಾಕರಿಸುತ್ತಾಳೆ. ತಪ್ಪು ಯಾರು ಮಾಡಿದರೂ ತಪ್ಪೇ ಎಂದು ಮರ್ಯಾದೆಯನ್ನು ಲೆಕ್ಕಿಸದೇ ಮಾತನಾಡುವ ಸಿರಿ ಅವನ ತಪ್ಪನ್ನು ಕ್ಷಮಿಸುವುದಿಲ್ಲ. ಪತಿ ತನ್ನನ್ನು ಬಿಟ್ಟು ಹೋದರೂ ಧೈರ್ಯದಿಂದ ಇರುತ್ತಾಳೆ. ಮೂರನೆಯದಾಗಿ ಸಿರಿಗೆ ಹೆರಿಗೆಯಾಗಿ ಮಗು ಹುಟ್ಟಿದಾಗ ಅವಳ ಪತಿ ಬರುವುದಿಲ್ಲ. ಮುಂದೆ ಬರ್ಮನಾಳ್ವ ಮರಣಿಸಿದಾಗ ಅಂತ್ಯ ಸಂಸ್ಕಾರಕ್ಕೆ ಬರುವುದಿಲ್ಲ.

ಸ್ವಾಭಿಮಾನಿಯಾದ ಸಿರಿ ಇದನ್ನು ಸವಾಲಾಗಿ ಸ್ವೀಕರಿಸಿ ತಾನೇ ತನ್ನ ತಂದೆಯ ಶವಸಂಸ್ಕಾರ ಮಾಡುತ್ತಾಳೆ. ಇದು ಮಹಿಳಾ ಪ್ರತಿನಿಧೀಕರಣದ ಹೊಸ ಹೆಜ್ಜೆಯಾಗಿದೆ. ಹೆಣ್ಣು ಕೇವಲ ಮನೆಗೆಲಸ ಮಾಡಲು, ಮಕ್ಕಳು ಹೆರಲು, ಹಿರಿಯರ ಸೇವೆಗೆ ಮಾತ್ರ ಸೀಮಿತವಾಗಿದ್ದು, ಇವಳ ದಿಟ್ಟ ನಡೆ ಸ್ತ್ರೀ ಶೋಷಣೆಯನ್ನು ಖಂಡಿಸುವ ಹೊಸ ನೆಲೆಯಾಗಿದೆ. ಗಂಡು ಮಕ್ಕಳಿದ್ದರೆ ಮಾತ್ರ ಮೋಕ್ಷ ಎನ್ನುವ ಪೌರಾಣಿಕ ಮೌಲ್ಯವನ್ನು ಮೀರಿ ನಡೆಯುತ್ತಾಳೆ. ನಾಲ್ಕನೆಯದಾಗಿ ಬರ್ಮನಾಳ್ವನ ಮರಣದ ನಂತರ ಸತ್ಯಾನಂದಪುರದ ಉತ್ತರಾಧಿಕಾರದ ಪ್ರಶ್ನೆ ಬಂದಾಗ ಊರಿನ ಹಿರಿಯರು ಪಂಚಾಯಿತಿ ಸೇರಿದಾಗ ಅನ್ನುಶೆಟ್ಟಿ, ಕಾಂತುಪೂಂಜ ಇದಕ್ಕೆ ಪೈಪೋಟಿ ನಡೆಸುತ್ತಾರೆ. ಆದರೆ ಸಿರಿ ಹಿರಿಯರ ಮತ್ತು ಸಮಾಜದ ಸಮ್ಮುಖದಲ್ಲಿ ಅವರ ಮಗಳಾದ ನನಗೇ ಉತ್ತರಾಧಿಕಾರ ಸಿಗಬೇಕು ಎಂದು ವಾದಿಸುತ್ತಾಳೆ. ಆದರೆ ಅವಳ ವಾದವನ್ನು ಪುರುಷ ಪ್ರಧಾನ ಸಮಾಜ ತಳ್ಳಿ ಹಾಕುತ್ತದೆ. ಇದು ಇಂದಿನ ನ್ಯಾಯಾಂಗ ವ್ಯವಸ್ಥೆಯ ಹೊಸ ನಿಯಮಗಳನ್ನು ಪ್ರತಿನಿಧಿಸುತ್ತದೆ. ಹೆಣ್ಣುಮಕ್ಕಳಿಗೂ ಆಸ್ತಿಯ ಹಕ್ಕಿದೆ ಎಂಬ ಮಾತನ್ನು ಎತ್ತಿ ಹಿಡಿಯುತ್ತದೆ. ಸ್ತ್ರೀ ಆಡಳಿತ ನಡೆಸಲು ಅಸಮರ್ಥಳು ಎನ್ನುವ ಮಾತನ್ನು ಒಪ್ಪದ ಸಿರಿ ಕೆಲವು ಕಠಿಣ ನಿರ್ಧಾರ ತೆಗೆದುಕೊಳ್ಳುವಂತೆ ಮಾಡುತ್ತದೆ. ಸತ್ಯಾನಂದಪುರ ತೊರೆದು ಬರುವಾಗ ಅವಳು ತನಗಾದ ಅನ್ಯಾಯ, ಅವಮಾನದಿಂದ ಸತ್ಯಾನಂದಪುರದ ತನ್ನ ಆಸ್ತಿ ಐಶ್ವರ್ಯ ಪರರಪಾಲಾಗಬಾರದೆಂದು ಶಾಪ ನೀಡುತ್ತಾಳೆ. ಧಾನ್ಯ ಹಾಳಾಗಲಿ, ತೆಂಗಿನಕಾಯಿ ಕೊಳೆತು ಹೋಗಲಿ, ಹಾಲುಕೊಡುವ ಹಸು ಎತ್ತಾಗಲಿ, ಭೂಮಿ ಬಂಜರಾಗಲಿ ಎಂದಾಗ ಅವಳ ಮಗ ಆಡುತ್ತಿದ್ದ ಪ್ರದೇಶಬಿಟ್ಟು ಎಲ್ಲವೂ ಹೊತ್ತಿ ಉರಿಯುತ್ತದೆ. ಐದನೆಯದಾಗಿ ತನ್ನ ಗಂಡನಿಗೆ ತನಗೆ ವಿಚ್ಛೇದನ ನೀಡುವಂತೆ ಕೇಳತ್ತಾಳೆ. ಕನ್ಯಾಶುಲ್ಕವನ್ನು ಮರಳಿಸುತ್ತಾಳೆ. ಇಷ್ಟವಿಲ್ಲದ ಗಂಡನ ಜೊತೆ ಬಾಳುವುದಕ್ಕಿಂತ ಇಷ್ಟವಿರುವ ವ್ಯಕ್ತಿಯೊಡನೆ ಮರುಮದುವೆಗೆ ಸಿದ್ಧಳಾಗುತ್ತಾಳೆ. ಈ ವಿಚಾರಗಳು ಆಧುನಿಕ ಸಮಾಜದ ಪ್ರತಿಬಿಂಬವಾಗಿವೆ. ಕೇವಲ ಬಹುಪತ್ನಿತ್ವ ಇದ್ದಂತ ಕಾಲದಲ್ಲಿ ಹೆಣ್ಣಿಗೆ ಮರುಮದುವೆಯ ಅವಕಾಶವಿರಲಿಲ್ಲ. ಇದನ್ನು ದಿಕ್ಕರಿಸಿದ ಸಿರಿಯ ಪಾತ್ರ ವಿಶೇಷವಾಗಿ ಕಾಣುತ್ತದೆ. ವಿಚ್ಛೇದನೆ ಇತ್ತೀಚಿನ ದಿನಮಾನದಲ್ಲಿ ಸಾಮಾನ್ಯವಾದರೂ ಸ್ವಾಭಿಮಾನ, ಸ್ವ ಗೌರವದ ಮುಂದೆ ಕೆಲ ಪುರಾತನ ಮೌಲ್ಯಗಳು ಗೌಣವಾಗುತ್ತವೆ ಎಂಬುದನ್ನು ಸಿರಿಯ ನಿರ್ಧಾರ ಪ್ರತಿನಿಧಿಸುತ್ತದೆ. ಸಿರಿ ಕೊಡಸರಾಳ್ವನನ್ನು ಮದುವೆಯಾದಾಗ ಅವನ ಮೊದಲ ಹೆಂಡತಿ ಸಾಮು ಇವಳನ್ನು ಮನೆ ತುಂಬಿಸಿಕೊಳ್ಳಲು ಮುಂದೆ ಬರದಾಗ ಅವಳೇ ಬಂದು ಮನೆ ತುಂಬಿಸಿ ಕೊಂಡರೆ ತಾನು ಒಳಬರುವುದಾಗಿ ಇಲ್ಲವಾದಲ್ಲಿ ಮರಳಿ ಹೋಗುವುದಾಗಿ ಹೇಳುತ್ತಾಳೆ ಮತ್ತು ಅವಳ ಮನವೊಲಿಸಿ ಮನೆಯಲ್ಲಿ ಅಡಿಯಿಟ್ಟು ತನ್ನ ಸ್ಥಾನ ಭದ್ರಪಡಿಸಿಕೊಳ್ಳುತ್ತಾಳೆ. ಇದು ಕೂಡ ಅವಳ ದಿಟ್ಟ ನಿರ್ಧಾರವಾಗಿ ಕಾಣಿಸುತ್ತದೆ. ಎರಡನೇ ಹೆಂಡತಿಗೆ ಕೆಟ್ಟದಾಗಿ ಕಾಣುವ ಸಮಾಜದ ಬಾಯಿ ಮುಚ್ಚುವ

ಕೆಲಸ ಸಿರಿ ಇಲ್ಲಿ ಮಾಡುತ್ತಾಳೆ. ಹೀಗೆ ಸಿರಿ ತನ್ನನ್ನು ನೋಯಿಸಿದ, ಶೋಷಿಸಿದ ಸಮಾಜಕ್ಕೆ, ಸಂಪ್ರದಾಯಗಳಿಗೆ ಬೆನ್ನು ತೋರಿಸದೆ ಧೈರ್ಯದಿಂದ ಮುಖಾಮುಖಿಯಾಗಿ ನಿಂತು ಹೆಣ್ಣಿನ ಶೋಷಣೆಯ ವಿರುದ್ಧ ಎಚ್ಚರಿಕೆ ನೀಡುವ, ಮಹಿಳಾ ಪ್ರತಿನಿಧೀಕರಣದ ಧೀರ ಮಹಿಳೆಯಾಗಿ ಕಂಗೊಳಿಸುತ್ತಾಳೆ. ಹೆಣ್ಣು, ಹೊನ್ನು, ಮಣ್ಣು ಎಂದು ಆಸೆಯಿಂದ ಯಜಮಾನಿಕೆ ಸ್ಥಾಪಿಸುವ ಗಂಡಿನ ಇರುವಿಕೆಗೆ ಸಿರಿ ಸವಾಲು ಹಾಕುವ ಸಿರಿ ಮಹಾಕಾವ್ಯ ಹೆಣ್ಣಿನ ಗಟ್ಟಿಧ್ವನಿಯನ್ನು ಸ್ಪಷ್ಟಪಡಿಸುತ್ತದೆ.

### ಪರಾಮರ್ಶನ ಗ್ರಂಥಗಳು:

1. ಅಶೋಕ ಆಳ್ವ, (2019), ಸಿರಿ ಕಾವ್ಯಾವಲೋಕನ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು.
2. ನಾವಡ ಎ.ವಿ., (2003), ತುಳು ಪಾಡ್ದನ ಬಂಧ ಮತ್ತು ವಿನ್ಯಾಸ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4.0 International License.